ದಿನಾಂಕ 26-09-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 8 ಮತ್ತು 10 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಕೆ ಎಸ್ ವಕೀಲರಿಂದ.

ನಾನು ಬಿ. ಕಾಂ. ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸಾಮಾಜಿಕ ಸೇವೆ ಮಾಡುತ್ತೇನೆ. ನಾನು ಬಿಜಾಪುರದಲ್ಲಿ 30 ವರ್ಷಗಳಿಂದ ವಾಸ ಇದ್ದೇನೆ. ನನ್ನ ತಂದೆ ಬಿಜಾಪುರದಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿಯ ಮದುವೆಯಾಗಿ ಸುಮಾರು 55 ವರ್ಷಗಳು ಆಗಿವೆ. ನನ್ನ ದೊಡ್ಡಮ್ಮ ಲಕ್ಷ್ಮಿಬಾಯಿ ರವರ ಮದುವೆ ಸುಮಾರು 60 ವರ್ಷಗಳ ಹಿಂದೆ ಆಗಿರಬಹುದು, ಅವರು ಈಗ ಕಾವಲವಾಡ ಗ್ರಾಮದಲ್ಲಿ ಇರುತ್ತಾರೆ. ನನ್ನ ಚಿಕ್ಕಮ್ಮ ಮಹಾದೇವಿ ರವರ ಮದುವೆ ಸುಮಾರು 60 ವರ್ಷಗಳ ಹಿಂದೆ ಆಗಿರಬಹುದು, ಅವರು ಈಗ ಹಳಿಯಾಳ ಪಟ್ಟಣದಲ್ಲಿ ಇರುತ್ತಾರೆ. ನನ್ನ ತಾಯಿಯ ತಂದೆ ಬಾಪು ಅಂದರೆ ನನ್ನ ಅಜ್ಜ 1976 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿಯ ತಂದೆ ನನ್ನ ಅಜ್ಜ ಹಳಿಯಾಳದಲ್ಲಿ ವಾಸವಿದ್ದರು. ಬಾಪು ರವರು ಮರಣ ಹೊಂದಿದ ನಂತರ ನನ್ನ ಮಾಮಾ ರವರಾದ ನಿಂಗಪ್ಪ ರವರು ಉಳುಮೆ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಸ್ವಲ್ಪ ದಿನ ಬೇರೆಯವರಿಗೆ ಸಾಗುವಳಿ ಮಾಡಲು ಕೊಟ್ಟಿದ್ದರು, ಯಾರಿಗೆ ಸಾಗುವಳಿ ಮಾಡಲು ಕೊಟ್ಟಿದ್ದರು ಎಂದು ನನಗೆ ಅವರ ಹೆಸರು ಗೊತ್ತಿಲ್ಲ. ಸುಮಾರು ಎಷ್ಟು ವರ್ಷಗಳ ವರೆಗೆ ಬೇರೆಯವರಿಗೆ ಸಾಗುವಳಿ ಮಾಡಲು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನಿಂಗಪ್ಪನವರ ಹೆಸರಿನಲ್ಲಿ ಯಾವಾಗ ನಮೂದಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಜಾನಕಿಬಾಯಿ ನನ್ನ ಅಜ್ಜನ ಎರಡನೇ ಹೆಂಡತಿ, ಮೊದಲನೇ ಹೆಂಡತಿಯ ಹೆಸರು ನಾಗವ್ವ. ನಾಗವ್ವ ರವರು ದಿನಾಂಕ 13-06-1963 ರಂದು ಮರಣ ಹೊಂದಿದರು. ಜಾನಕಿಬಾಯಿ ರವರು ದಿನಾಂಕ 20-12-2000 ರಂದು ಮರಣ ಹೊಂದಿದರು. ನಿಮ್ಮ ವಾದ ಪತ್ರ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಯಾವಾಗ ದಾವಾ ಸ್ವತ್ತು ನಿಂಗಪ್ಪನವರ ಹೆಸರಿನಲ್ಲಿ ನಮೂದಾಗಿತ್ತು ಎಂದು ನಮೂದಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಂಗಪ್ಪನವರ ಹೆಸರಿನಲ್ಲಿ ದಾವಾ ಸ್ವತ್ತು ಯಾವಾಗ ನಮೂದಾಗಿತ್ತು ಎಂದು ತಿಳಿದುಕೊಳ್ಳಲು ದಾಖಲೆಗಳನ್ನು ಪಡೆಯಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವೆಯಲ್ಲಿ ನಿಂಗಪ್ಪನವರು ಇದೇ ದಿನಾಂಕದಂದು ತಮ್ಮ ಹೆಸರನ್ನು ದಾವಾ ಸ್ವತ್ತುಗಳಿಗೆ ಹಚ್ಚಿಕೊಂಡಿದ್ದಾರೆ ಎಂದು ಬರೆಯಲು ತೊಂದರೆ ಇತ್ತೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇರಲಿಲ್ಲ, ನನ್ನ ತಾಯಿ ಹೇಳಿದ ನಂತರ ಗೊತ್ತಾಗಿದೆ ಎನ್ನುತ್ತಾರೆ. ದಾವಾ ಸ್ವತ್ತಿನ ಕುರಿತು ನಿಮ್ಮ ತಾಯಿಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನಿಮ್ಮ ತಾಯಿಯವರಿಂದ ತಿಳಿದುಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನೀವು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹಾಜರುಪಡಿಸಿದ ದಾಖಲೆಗಳಲ್ಲಿ ನಿಂಗಪ್ಪನವರ ಹೆಸರು ಯಾವಾಗ ನಮೂದಾಯಿತು ಎಂದು ಬರೆದಿದೆಯೇ ಎಂದರೆ ಸಾಕ್ಷಿ ಬರೆದಿರಬಹುದು ಈಗ ನೆನಪಿಲ್ಲ ಎನ್ನುತ್ತಾರೆ. ನಿಪಿ 17 ರ ದಾಖಲೆ ಆದ ನಂತರ ದಾವಾ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನಿಂಗಪ್ಪ ನವರ ಹೆಸರಿನಲ್ಲಿತ್ತು ಎನ್ನುತ್ತಾರೆ.

O.S.73/2021 Cross of PW 1

ಸಾಕ್ಷಿಯು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.